**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 67/2018

ಸಿಡಬ್ಲ್ಯೂ-6/ ಪಿಡಬ್ಲ್ಯೂ-03.

| | |
|---|---|
| ಸಾಕ್ಷಿದಾರರ ಹೆಸರು | ಃ ಸಿದ್ದಲಿಂಗಪ್ಪ |
| ತಂದೆಯ ಹೆಸರು | ಃ ನಿಂಗಪ್ಪ ಗಳಿಗಿ |
| ವಯಸ್ಸು | ಃ 29 ವರ್ಷ |
| ವೃತ್ತಿ | ಃ ರೈತಾಪಿ |
| ವಾಸ್ತವ್ಯ | ಃ ನೆಲ್ಲಿಹರವಿ, ಕಲಘಟಗಿ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 17-03-2022.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾಲ್ಕೈದು ವರ್ಷಗಳ ಹಿಂದೆ ನನ್ನೊಟ್ಟಿಗೆ ಇನ್ನೊಬ್ಬರು ಸೇರಿ ಮುಂಡಗೋಡಕ್ಕೆ ಬಂದಿರುತ್ತೇವೆ. ಮುಂಡಗೋಡಿಗೆ ಬಂದು ನಮ್ಮ ಪರ್ಸನಲ್ ಕೆಲಸ ಮುಗಿಸಿಕೊಂಡು ಸುಮಾರು 6-30 ಗೆ ಇಲ್ಲಿಂದ ಊರಿಗೆ ಹೋಗುತ್ತಿದ್ದೆವು. ಆವಾಗ ಹೋಗುತ್ತಿದ್ದಾಗ ಫಾರೆಸ್ಟ ಗೇಟ್ ನ ಹತ್ತಿರ ಭತ್ತ ಕೊಯ್ಯುವ ಮಶಿನ್ ನನ್ನು ಇಟ್ಟು ಕೊಂಡು ಅವನು ಅದನ್ನು ಅಡ್ಡಾದಿಡ್ಡಿಯಾಗಿ ಓಡಿಸಿಕೊಂಡು ಹೋಗುತ್ತಿದ್ದ. ಅವನಿಗೆ ನಾವು ಯಾಕೆ ಆ ರೀತಿ ಹೋಗುತ್ತಿಯ ಅಂತಾ ಕೇಳಿದೆವು. ಅಷ್ಟೊತ್ತಿಗೆ ನಾವು ಬಾಯಿ ಮಾಡಿದ್ದರು ಸಹ ಕೇಳಿರುವುದಿಲ್ಲ, ಮುಂದೆ ಹೋಗಿ ಇವನಿಂದ ತಪ್ಪಿನಿಂದಲೇ ಬೈಕಿಗೆ ಅಪಘಾತ ಪಡಿಸಿದ್ದ, ಬೈಕ್ ನವನು ತನ್ನ ಸೈಡಿನ ಎಡಗಡೆ ಇದ್ದ. ಆಮೇ ಲೆ ನಾವು ಬೈಕ್ ಇಳಿದು ನಾವು ಯಾರು ಅಂತಾ ನೋಡಿದೆವು, ಆವಾಗ ಭತ್ತ ಕೊಯ್ಯುವ ಗಾಡಿಯವನು ಓಡಿ ಹೋದ, ನಾವು ಬಾಯಿ ಮಾಡಿದರು ಅವನು ನಿಲ್ಲಲಿಲ್ಲ. ಅವನು ಯಾರಂತ ನನಗೆ ಗೊತ್ತಿರಲಿಲ್ಲ. ಬೈಕ್ ನಲ್ಲಿ ಬಂದವನು ಸ್ಪಾಟ್ ನಲ್ಲಿ ಡೆತ್ ಆಗಿದ್ದ. ನನ್ನ ಕೂಟ ಬಂದಿದ್ದ ಇನ್ನೊಬ್ಬನಿಗೆ ಅವನು ಪರಿಚಯ ಇದ್ದ, ಅವನು ಫೋನ್ ಮಾಡಿದ. ಆಮೇಲೆ ಅವರು ಬಂದರು, ಪೋಲಿಸರು ಬಂದು ಎಲ್ಲಾ ಬರೆದರು, ಆಮೇಲೆ ನಾವು ಮನೆಗೆ ಹೋದೆವು. ನನ್ನ ಜೊತೆ ಇದ್ದವರು ಮುಂಡಗೋಡ ಪೋಲಿಸ್ ಠಾಣೆಗೂ ಸಹ ಫೋನಿ ಹಚ್ಚಿದ್ದರು. ಆ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸ್ದ್ರಿ ಹೇಳಿಕೆಯನ್ನು ನಿಪಿ-8 ಅಂತಾ ಗುರುತಿಸ ಲಾಯಿತು. ಆಮೇಲೆ ಬೊಮ್ಮಿಗಟ್ಟಿ ಯಿಂದ ಸುಮಾರು ಜನ ಬಂದಿದ್ದರು, ಅವರ ಅಣ್ಣಾನೂ ಬಂದಿದ್ದರು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಈ ದಿನ ಆರೋಪಿ ಗೈರು ಹಾಜರಾಗಿರುತ್ತಾರೆ ಹಾಗಾಗಿ ಮುಂದಿನ ವಿಚಾರಣೆಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

ಪ್ರ.ದ.ನ್ಯಾದಂ. ಮುಂಡಗೋಡ.